ರೈತರಿಗೆ ಸಾಲ ಮಂಜೂರಾತಿ

6 (54)

ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ)

ಅ) ದಿನಾಂಕ: 01.07.2011 ರಿಂದ 30.06.2012 ರವರೆಗೆ ಎಷ್ಟು ರೈತರಿಗೆ ಸಾಲ ಮಂಜೂರು ಮಾಡಲಾಗಿದೆ (ವಿವರ ನೀಡುವುದು) ?

ಆ) ಎಷ್ಟು ಮೊತ್ತದ ಸಾಲವನ್ನು ಮಂಜೂರು ಮಾಡಲಾಗಿದೆ; ಎಷ್ಟು ಮೊತ್ತ ವಿತರಿಸಲಾಗಿದೆ ?

ಇ) ಇವರುಗಳ ಪೈಕಿ ಎಷ್ಟು ರೈತರು ಸಾಲವನ್ನು ಮರುಪಾವತಿ ಮಾಡಿರುತ್ತಾರೆ. ಮೊತ್ತವೆಷ್ಟು ?

ಬಿ.ಜೆ. ಪುಟ್ಟಸ್ವಾಮಿ (ಸಹಕಾರ ಸಚಿವರು)

ಅ) ದಿನಾಂಕ: 01.07.2011 ರಿಂದ 30.06.2012 ರವರೆಗೆ 17,77,003 ಜನ ರೈತರಿಗೆ ಸಹಕಾರ ಕೃಷಿ ಪತ್ತಿನ ಸಂಘಗಳಿಂದ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ಮಂಜೂರು ಮಾಡ-ಲಾಗಿದೆ.

ಆ) ದಿನಾಂಕ: 01.07.2011 ರಿಂದ 30.06.2012 ರವರೆಗೆ ರೂ. 7279.56 ಕೋಟಿಗಳಷ್ಟು ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲವನ್ನು ಮಂಜೂರು ಮಾಡಿದ್ದು, ಈ ಪೈಕಿ ರೂ. 6416.72 ಕೋಟಿಗಳಷ್ಟು ಸಾಲವನ್ನು ವಿತರಿಸಲಾಗಿದೆ.

ಇ) ಇವರುಗಳ ಪೈಕಿ 783747 ರೈತರು ಸಾಲವನ್ನು ಮರುಪಾವತಿ ಮಾಡಿರುತ್ತಾರೆ. ಇದರ ಮೊತ್ತ ರೂ. 2809.22 ಕೋಟಿಗಳಷ್ಟಾಗಿರುತ್ತದೆ.